O.S.No.:222/2014
D.W.:1

ಈ ದಿನ ದಿಃ06.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಕೆ.ವೈ.ಎಸ್ ರವರಿಂದಃ-**

4. ನಿಡಿ-11ರ ಪ್ರಕಾರ ಸದರಿ ಕಂದಾಯವು ಕೆಂಪಮ್ಮ ರವರ ಹೆಸರಿಗೆ ಪಾವತಿಯಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.72/2ರ ಜಮೀನು ಈಗ ಯಾರ ಹೆಸರಿನಿಂದ ಬರುತ್ತಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ವೀರಭದ್ರೇಗೌಡ ಬಿನ್ ದೊಡ್ಡಕುನ್ನೇಗೌಡ ರವರ ಹೆಸರಿಗೆ ಬರುತ್ತಿದೆ ಎಂದು ನುಡಿಯುತ್ತಾರೆ. ವೀರಭದ್ರೇಗೌಡ ನನ್ನ ತಂದೆ ಎಂದರೆ ಸರಿ. ಸರ್ವೆ ನಂ.72/2ರ ಜಮೀನು ನಿಮ್ಮ ತಂದೆಯವರಿಗೆ ಹೇಗೆ ಬಂತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಕ್ರಯದ ಮೂಲಕ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ಸರ್ವೆ ನಂ.72/2ರ ಜಮೀನಿಗೆ ಸಂಬಂಧಿಸಿದಂತೆ ಕ್ರಯಪತ್ರವು ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಆಗಿರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ಸರ್ವೆ ನಂ.72/2ಕ್ಕೆ ಸಂಬಂಧಿಸಿದಂತೆ ನಮ್ಮ ತಂದೆಯ ಹೆಸರಿಗೆ ಇರುವ ಕ್ರಯಪತ್ರ ನಮ್ಮ ಬಳಿ ಇರುತ್ತದೆ. ಸದರಿ ಕ್ರಯಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

5. ಸರ್ವೆ ನಂ.72/2ರ ಜಮೀನು ನಮ್ಮ ತಂದೆಯವರಿಗೆ ಡಿಬೋಳೇಗೌಡ

ಎನ್ನುವವರು ಬರೆದುಕೊಟ್ಟಿರುತ್ತಾರೆ. ಸದರಿ ಡಿಬೋಳೇಗೌಡ ರವರಿಗೆ ಸರ್ವೆ ನಂ.72/2ರ ಜಮೀನು ಹೇಗೆ ಬಂದಿತ್ತು ಎಂಬ ಬಗ್ಗೆ ನಾನು ತಿಳಿದುಕೊಂಡಿಲ್ಲ. ಸರ್ವೆ ನಂ.72/2ರ ಜಮೀನಿನ ಮೂಲತಃ ಯಾರಿಗೆ ಸೇರಿದ್ದು ಎನ್ನುವುದು ನನಗೆ ಗೊತ್ತಿಲ್ಲ. ಸರ್ವೆ ನಂ.72/2ರ ಜಮೀನು ಮೂಲತಃವಾಗಿ ಕಾಡ ಬಿನ್ ಕರಿಕುನ್ನ ರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸರ್ವೆ ನಂ.72/2ರ ಜಮೀನು ಕಾಡ ಬಿನ್ ಕುರಿಕುನ್ನ ರವರ ಹೆಸರಿಗೆ ಇರುವ ದಾಖಲೆಯನ್ನು ನಾನೇ ಈ ದಾವೆಯಲ್ಲಿ ಹಾಜರುಪಡಿಸಿದ್ದರೂ ಆ ಜಮೀನು ಅವರಿಗೆ ಸೇರಿಲ್ಲ ಎಂದು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಈ ದಾವೆಯನ್ನು ವಾದಿ ಸಲ್ಲಿಸಿದ ನಂತರ ನಿಡಿ-12ರಂತೆ ನಾನು ಅಪೀಲು ಸಲ್ಲಿಸಿರುತ್ತೇನೆ ಎಂದರೆ ಸರಿ. ನಿಡಿ-12ರ ಪ್ರಕಾರ ಎಸಿ ರವರು ಸ್ವಾಧೀನಾನುಭವವನ್ನು ಪರಿಶೀಲಿಸಿ ಸರ್ವೆ ನಂ.72/3ರಲ್ಲಿ ಇರುವಂತಹ 29 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಖಾತಾ ಕ್ರಮವನ್ನು ಕೈಗೊಳ್ಳುವಂತೆ ತಹಶೀಲ್ದಾರ್ ರವರಿಗೆ ನಿರ್ದೇಶಿಸಿ ಆದೇಶ ಮಾಡಿರುತ್ತಾರೆ ಎಂದರೆ ಸರಿ. ನಿಡಿ-12ರ ಆಧಾರದ ಮೇಲೆ ಖಾತೆ ಮಾಡುವಂತೆ ಕೋರಿ ನಾನು ತಹಶೀಲ್ದಾರ್ ರವರ ಮುಂದೆ ನಾನು ಅರ್ಜಿ ಕೊಟ್ಟಿರುತ್ತೇನೆ. ನಿಡಿ-12ರ ಆದೇಶದಂತೆ ತಹಶೀಲ್ದಾರ್ ರವರು ಏನಾದರೂ ಕ್ರಮ ತೆಗೆದುಕೊಂಡಿದ್ದಾರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇನ್ನು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ನಿಡಿ-12ರ

ಆದೇಶದ ಆಧಾರದ ಮೇಲೆ ತಹಶೀಲ್ದಾರ್ ರವರು ಆರ್.ಆರ್.ಟಿ.ಡಿ.ಎಸ್ 22/2024ರಂತೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಅರ್ಜಿಯ ಮೇಲೆ ದಾಖಲಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ.29.10.2024ರಂದು ಹಾರೋಹಳ್ಳಿ ತಹಶೀಲ್ದಾರ್ ರವರು ಸದರಿ ಅರ್ಜಿಯನ್ನು ವಜಾಗೊಳಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಆದೇಶದ ಪ್ರತಿ ಸಿಕ್ಕಿಲ್ಲ, ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ತಹಶೀಲ್ದಾರ್ ರವರ ಮುಂದೆ ನಡೆದ ಪ್ರಕರಣದಲ್ಲಿ ನಾನು ಸುಮಾರು 10 ಬಾರಿ ಹಾಜರಾಗಿದ್ದೆ. ಸದರಿ ತಹಶೀಲ್ದಾರ್ ರವರ ಪ್ರಕರಣದಲ್ಲಿ ವಾದಿಯು ಸಹ ವಕೀಲರ ಮೂಲಕ ಹಾಜರಾಗಿದ್ದರು ಎಂದರೆ ಸರಿ. ತಹಶೀಲ್ದಾರ್ ರವರು ತಮ್ಮ ಮುಂದೆ ನಡೆದ ಪ್ರಕರಣದಲ್ಲಿ ಮಾಡಿದಂತಹ ಆದೇಶವನ್ನು ನಾನು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

7. ಸರ್ವೆ ನಂ.72/3ಕ್ಕೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಗಳು 2013ರ ವರೆಗೂ ಕಾಡ ಬಿನ್ ವೀರಭದ್ರ ರವರ ಹೆಸರಿಗೆ ಬರುತ್ತಿತ್ತು ಎಂದರೆ ಸರಿ. ಆದಾದನಂತರ ಐಡಿ-16ರ ಪ್ರಕಾರ ಸದರಿ ಸರ್ವೆ ನಂ.72/3ರ ಖಾತೆಯು ವಾದಿಯ ಹೆಸರಿಗೆ ಬದಲಾಗಿರುತ್ತದೆ ಎಂದರೆ ಸಾಕ್ಷಿಯು ಅವರು ಕಾನೂನು ಬಾಹಿರವಾಗಿ ಖಾತೆ ಮಾಡಿಸಿಕೊಂಡಿದ್ದಾರೆ ಮತ್ತು ಅವರ ಹೆಸರಿಗೆ ಪಹಣಿ ಇರಬಹುದು, ಆದರೆ

ಸ್ವಾಧೀನಾನುಭವದಲ್ಲಿ ನಾವು ಇದ್ದೇವೆ ಎಂದು ನುಡಿಯುತ್ತಾರೆ. ವಾದಿಯ ಹೆಸರಿಗೆ ಖಾತೆ ಮಾಡಬೇಡಿ ಎಂದು ನೀವು ಏನಾದರೂ ತಕರಾರು ಸಲ್ಲಿಸಿದ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆ ಸಮಯದಲ್ಲಿ ನಮಗೆ ಯಾವುದೇ ನೋಟಿಸ್ಸು ಬಂದಿಲ್ಲ ಎಂದು ನುಡಿಯುತ್ತಾರೆ. ಖಾತೆಗಳನ್ನು ಮಾಡುವ ಸಮಯದಲ್ಲಿ ಸಾಮಾನ್ಯವಾಗಿ ಅದರ ಬಗ್ಗೆ ಗ್ರಾಮದಲ್ಲಿ ಪ್ರಚಾರಪಡಿಸುತ್ತಾರೆ ಎಂದರೆ ಸರಿ.

8. 1960 ರಿಂದ 1980ರ ವರೆಗೂ ಸರ್ವೆ ನಂ.72/3ರ ಜಮೀನಿನ ಖಾತೆಯು ವಾದಿಯ ಮಾವನ ಹೆಸರಿಗೆ ಬರುತ್ತಿದ್ದುದ್ದರ ವಿರುದ್ದ ನಿಮ್ಮ ತಂದೆಯವರು ಏನಾದರೂ ಪ್ರಶ್ನಿಸಿದ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಮ್ಮ ತಂದೆಯವರು ಅವಿದ್ಯಾವಂತರಾದ ಕಾರಣಕ್ಕೆ ಕ್ರಯಪತ್ರದ ಪ್ರಕಾರ ಅವರು ತಮ್ಮ ಹೆಸರಿಗೆ ಯಾವುದೇ ಖಾತೆ ಮಾಡಿಸಿಕೊಂಡಿರಲಿಲ್ಲ ಎಂದು ನುಡಿಯುತ್ತಾರೆ. ನನಗೆ ಈಗ 71ವರ್ಷ ವಯಸ್ಸು. ನಾನು 1978ರಲ್ಲಿ ಬಿಎ ಪದವಿಯನ್ನು ಪಡೆದುಕೊಂಡಿರುತ್ತೇನೆ. 1978ರಲ್ಲಿ ಆದರೂ ನಾನು ಖರೀದಿ ಪತ್ರದ ಆಧಾರದ ಮೇಲೆ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಬಹುದಾಗಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಸರ್ಕಾರಿ ನೌಕರಿಯಲ್ಲಿದ್ದ ಕಾರಣಕ್ಕೆ ಅದರ ಬಗ್ಗೆ ಅಷ್ಟಾಗಿ ಗಮನ ಹರಿಸಲಿಲ್ಲ ಎಂದು ನುಡಿಯುತ್ತಾರೆ.

9. ಖರೀದಿ ಪತ್ರದ ದಿನಾಂಕದಿಂದ ವಾದಿಯು ಈ ದಾವೆಯನ್ನು

ಹೂಡುವವರೆಗೂ ನಾವುಗಳು ಯಾರು ಖಾತೆ ಮಾಡಿಸಿಕೊಳ್ಳಲು ಪ್ರಯತ್ನಪಡಲಿಲ್ಲ ಎಂದರೆ ಸಾಕ್ಷಿಯು ಸ್ವಾಧೀನಾನುಭವದಲ್ಲಿ ನಾವು ಇದ್ದೇವು, ಹಾಗಾಗಿ ಮಾಡಿಸಿಕೊಳ್ಳಲಿಲ್ಲ ಎಂದು ನುಡಿಯುತ್ತಾರೆ. ಸ್ವಾಧೀನಾನುಭವದಲ್ಲಿರುವ ವ್ಯಕ್ತಿಗಳಿಗೆ ಕಂದಾಯ ಇಲಾಖೆಯಿಂದ ಪಟ್ಟಾಪುಸ್ತಕವನ್ನು ಕೊಡುತ್ತಾರೆ, ಸದರಿ ಪಟ್ಟಾಪುಸ್ತಕವನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ಭೂಹಿಡುವಳಿ ಪ್ರಮಾಣ ಪತ್ರವನ್ನು ಈ ದಾವೆಯಲ್ಲಿ ನಾನು ಹಾಜರುಪಡಿಸಿಲ್ಲ. ದಾವಾಸ್ವತ್ತಿನಲ್ಲಿ ನಾವು ಸ್ವಾಧೀನಾನುಭವದಲ್ಲಿ ಇಲ್ಲ, ಹಾಗಾಗಿ ನಾನು ಪಟ್ಟಾಪುಸ್ತಕ ಮತ್ತು ಭೂಹಿಡುವಳಿ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1960 ರಿಂದಲ್ಲೂ 2022ರ ವರೆಗೂ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯವನ್ನು ಪಾವತಿಸಲು ನಿಮಗೆ ಏನು ತೊಂದರೆ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಏನು ತೊಂದರೆ ಇರಲಿಲ್ಲ, ಬಾಕಿ ಇದ್ದುದ್ದನ್ನು ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ.

10. ಕ್ರಯಪತ್ರವು 1962ನೇ ಸಾಲಿನಲ್ಲಿ ಆಗಿರುತ್ತದೆ, ದಿನಾಂಕ ಮತ್ತು ತಿಂಗಳು ನೆನಪಿಲ್ಲ. ನಿಡಿ-14ರ ಮೊದಲನೇ ಪುಟದ ಮೂರನೇ ಸಾಲಿನಲ್ಲಿ ಮತ್ತು ವೀರಭದ್ರೇಗೌಡ ರವರು ಸಹ ಎಂಬ ಪದಗಳನ್ನು ಇತ್ತೀಚಗೆ ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದರ ಬಗ್ಗೆ ಆ ದಾಖಲೆಯಲ್ಲಿ ಷರಾ ಬರೆಯಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-14ರಲ್ಲಿ ಬರೆದ ಇತರೆ

ಬರಹಗಳ ಇಂಕಿನ ಶಾಹಿಗೂ, ಮೊದಲನೇ ಪುಟದ ಮೂರನೇ ಸಾಲಿನಲ್ಲಿ ಬರೆದ ವೀರಭದ್ರೇಗೌಡ ಎಂಬ ಹೆಸರಿನ ಇಂಕಿನ ಶಾಹಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬರಹಗಳು ಒಂದೇ ಇದೆ ಎಂದು ನುಡಿಯುತ್ತಾರೆ. ನಿಡಿ-14ರ ಮೊದಲನೇ ಪುಟದ ಮೂರನೇ ಸಾಲಿನಲ್ಲಿ ವೀರಭದ್ರೇಗೌಡ ಎಂಬ ಹೆಸರನ್ನು ನಾವೇ ಇತ್ತಿಚೆಗೆ ಸೇರಿಸಿಕೊಂಡಿದ್ದರು, ಸೇರಿಸಿಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ನಿಡಿ-13ರ ಆಧಾರದ ಮೇಲೆ ಚೂಡಲಿಂಗೇಗೌಡ ಉಃ ಶಿವಣ್ಣ ರವರ ಹೆಸರಿಗೆ ಆ ಪತ್ರದಡಿಯಲ್ಲಿ ಖರೀದಿ ಮಾಡಿದ ಜಮೀನಿಗೆ ಸಂಬಂಧಿಸಿದಂತೆ ಖಾತೆ ಆಗಿತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಖಾತೆ ಆಗಿರಲಿಲ್ಲ ಎಂದು ನುಡಿಯುತ್ತಾರೆ. ನಿಡಿ-13ರಂತೆ ಕ್ರಯಪತ್ರವನ್ನು ಬರೆದುಕೊಡುವ ಕಾಲಕ್ಕೆ ಸರ್ವೆ ನಂ.72/3ರ ಜಮೀನಿನ ಖಾತೆಯು ಯಾರ ಹೆಸರಿನಲ್ಲಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಕಾಡ ಬಿನ್ ವೀರಭದ್ರ ರವರ ಹೆಸರಿಗೆ ಇತ್ತು ಎಂದು ನುಡಿಯುತ್ತಾರೆ. ಸರ್ವೆ ನಂ.72/2ರ ಖಾತೆಯು ಕಾಡ ಬಿನ್ ಕರಿಕುನ್ನ ರವರ ಹೆಸರಿಗೆ ಇತ್ತು. 1960ನೇ ಇಸವಿಯಲ್ಲಿ ಸರ್ವೆ ನಂ.72/2 ಎಂದು ನಮೂದಿಸುವ ಬದಲು ವಾದಿಗೆ ಸಂಬಂಧಿಸಿದ ಸರ್ವೆ ನಂ.72/3 ಎಂದು ತಪ್ಪಾಗಿ ನಮೂದಿಸಿ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಚೂಡಲಿಂಗೇಗೌಡ ರವರು ಜಮೀನನ್ನು ನಮಗೆ ಮಾರಾಟ ಮಾಡುವುದಕ್ಕೂ ಮೊದಲು ಸರ್ವೆ

ನಂ.72/2 ಎಂದು ತಿದ್ದುಪಡಿ ಮಾಡಿಸಿಕೊಂಡು ಮಾರಾಟ ಮಾಡಬೇಕಾಗಿತ್ತು, ಆದರೆ ಅವರು ಯಾವುದೇ ತಿದ್ದುಪಡಿ ಮಾಡದೆ ಸರ್ವೆ ನಂ.72/3ರ ಜಮೀನು ನಮೂದಿಸಿಯೇ ನಮಗೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ಖರೀದಿಸಿದ್ದು ಸರ್ವೆ ನಂ.72/3 ರ ಜಮೀನಿನನ್ನೆ ಎಂದು ನುಡಿಯುತ್ತಾರೆ.

12. ನಿಡಿ-13ರಲ್ಲಿ ನಮೂದಿಸಿದ ಚಕ್ಕುಬಂದಿಯು ಸರ್ವೆ ನಂ.72/2ಕ್ಕೆ ಸಂಬಂಧಿಸಿದ್ದೆ ವಿನಾಃ  ಸರ್ವೆ ನಂ.72/3ಕ್ಕೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.72/3ರಲ್ಲಿ 29 ಗುಂಟೆ ಜಮೀನು ಇದೆ. ಸರ್ವೆ ನಂ.72/2ರಲ್ಲಿ 32 ಗುಂಟೆ ಜಮೀನು ಇದೆ. ನಿಡಿ-13ರ ಪ್ರಕಾರ ಸದರಿ ಜಮೀನಿನ ಪೂರ್ವಕ್ಕೆ ಲಿಂಗೇಗೌಡ ಬಿನ್ ಕಾಡೇಗೌಡ ರವರ ಜಮೀನು, ಪಶ್ಚಿಮಕ್ಕೆ ಸರ್ಕಾರಿ ಗೋಮಾಳದ  ಜಮೀನು, ಉತ್ತರಕ್ಕೆ ಇದೇ ಸರ್ವೆ ನಂಬರ್ ನ ಪೈಕಿ ನಮ್ಮ ಚಿಕ್ಕಪ್ಪನಾದ ಕಾಡೇಗೌಡ ರವರ ಜಮೀನು ಬರುತ್ತದೆ ಎಂದು ಬರೆಯಲಾಗಿರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು  ಉತ್ತರಕ್ಕೆ ಅವರ ಚಿಕ್ಕಪ್ಪನ ಸರ್ವೆ ನಂ.72/2ರ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ.  ನಿಡಿ-13ರಲ್ಲಿ ಮಾರಾಟ ಮಾಡಿದ ಜಮೀನಿನ ಉತ್ತರಕ್ಕೆ ನಮೂದಿಸಿರುವುದು ಸರ್ವೆ ನಂ.72/3ರಲ್ಲಿ ಉಳಿದ ಉಳಿಕೆ ಜಮೀನಿನ ಬಗ್ಗೆ ವಿನಾಃ ಸರ್ವೆ ನಂ.72/2ರ ಜಮೀನು ಅಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ನಿಡಿ-13ರಡಿಯಲ್ಲಿ ಸರ್ವೆ ನಂ.72/3ರ ಜಮೀನು ಮಾರಾಟವಾಗಿದ್ದರೆ ಅದರ ಚಕ್ಕಬಂದಿಯಲ್ಲಿ ಆ

ಜಮೀನಿನ ಉಳಿಕೆ ಜಮೀನು ಎಂದು ನಮೂದು ಮಾಡುತ್ತಿರಲಿಲ್ಲ, ಆದರೆ ನಿಡಿ-13ರಡಿಯಲ್ಲಿ ಸರ್ವೆ ನಂ.72/2ರ ಜಮೀನು ಮಾರಾಟ ಮಾಡಿದ್ದ ಕಾರಣಕ್ಕೆ ಅದರ ಚಕ್ಕುಬಂದಿಯ ಉತ್ತರ ದಿಕ್ಕಿಗೆ ಆ ಜಮೀನಿನಲ್ಲಿ ಉಳಿದ ಉಳಿಕೆ ಜಮೀನಿನ ಬಗ್ಗೆ ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಚಕ್ಕುಬಂದಿಯಲ್ಲಿ ಆ ಬಗ್ಗೆ ತಪ್ಪು ಬರೆಯಲಾಗಿರಬಹುದು ಎಂದು ನುಡಿಯುತ್ತಾರೆ.

13. ಕಾಡ ಬಿನ್ ವೀರಭದ್ರ ರವರ ಕುಟುಂಬಕ್ಕೆ ಸಂಬಂಧಿಸಿದ ವಂಶವೃಕ್ಷವನ್ನು ಹಾಜರುಪಡಿಸಲು ನನಗೆ ಸಾಧ್ಯವಿಲ್ಲ. ಕಾಡ ಎನ್ನುವವರಿಗೆ ಮಾರೇಗೌಡ ಎನ್ನುವ ಹೆಸರಿನ ಯಾವುದೇ ತಮ್ಮ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಕಾಡ, ವೀರಭದ್ರ, ಚೂಡಲಿಂಗೇಗೌಡ, ಭದ್ರಗಿರಿಗೌಡ, ಮಾರೇಗೌಡ ಎಂಬ ಹೆಸರಿನ ಹಲವಾರು ವ್ಯಕ್ತಿಗಳು ವಾಸವಿದ್ದಾರೆ ಎಂದರೆ ಸರಿ.

ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಆಲಿಸಿ ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**

O.S.No.:222/2014
D.W.:1